ಎಚ್.ಡಿ.ಕೋಟೆ: ಉತ್ತಮ ರಸ್ತೆಗೆ ಅಭಿವೃದ್ಧಿ ಭಾಗ್ಯ!

ಗುಂಡಿ ಬಿದ್ದ ರಸ್ತೆಯತ್ತ ಪಿಡಬ್ಲ್ಯುಡಿ ನಿರ್ಲಕ್ಷ್ಯ; ಜನರಲ್ಲಿ ಮೂಡಿದ ಅನುಮಾನ

ಮಂಜು ಕೋಟೆ

ಎಚ್.ಡಿ.ಕೋಟೆ,ಜ.೧೨– ಪಟ್ಟಣದ ರಸ್ತೆಯೊಂದರಲ್ಲಿ ಹದಗೆಟ್ಟಿರುವ ಭಾಗವನ್ನು ಬಿಟ್ಟು ಉತ್ತಮವಾಗಿರುವ ಭಾಗವನ್ನು ಲೋಕೋಪಯೋಗಿ ಇಲಾಖೆಯವರು ಅಭಿವೃದ್ಧಿಪಡಿಸುತ್ತಿರುವುದು ಜನರಲ್ಲಿ ಅನುಮಾನ ಮೂಡಿಸಿದೆ.

ಇಂಥ ವಿಶೇಷ ಕಾಮಗಾರಿಗೆ ಚಾಲನೆ ದೊರೆತಿರುವುದು ಪಟ್ಟಣದ ೧ನೇ ಮುಖ್ಯ ರಸ್ತೆಯಲ್ಲಿ. ಈ ರಸ್ತೆಯ ಬಾಪೂಜಿ ವೃತ್ತದಿಂದ ಲೋಕೋಪಯೋಗಿ ಇಲಾಖೆ ಕಚೇರಿವರೆಗೆ ೩೦ ಲಕ್ಷ ರೂ. ವೆಚ್ಚದಲ್ಲಿ ಅರ್ಧ ಕಿಲೋ ಮೀಟರ್ ದೂರ ಡಾಂಬರೀಕರಣ ಕಾಮಗಾರಿಯನ್ನು ಗುತ್ತಿಗೆದಾರರು ಆರಂಭಿಸಿದ್ದಾರೆ. ಈ ಭಾಗ ಬಹುತೇಕ ಚೆನ್ನಾಗಿಯೇ ಇದೆ.

ಆದರೆ, ಇದೇ ರಸ್ತೆ ವರದರಾಜಸ್ವಾಮಿ ದೇವಸ್ಥಾನದಿಂದ ಕೆಎಸ್ಆರ್‌ಟಿಸಿ ಡಿಪೋವರೆಗೆ ತೀವ್ರ ಹದಗೆಟ್ಟಿದೆ. ಇಂತ ದುಸ್ಥಿತಿ ನಿರ್ಮಾಣಗೊಂಡಿದ್ದರೂ ಇದನ್ನು ಅಭಿವೃದ್ಧಿಪಡಿಸಲು ಮುಂದಾಗದ ಅಧಿಕಾರಿಗಳು ಉತ್ತಮವಾಗಿರುವ ರಸ್ತೆಗೇ ಮತ್ತೆ ಡಾಂಬರೀಕರಣ ನಡೆಸುತ್ತಿರುವುದು ಜನತೆಗೆ ಅನುಮಾನ ಮೂಡಲು ಕಾರಣವಾಗಿದೆ.

೬ ವರ್ಷಗಳ ಹಿಂದೆ ಈ ಮುಖ್ಯ ರಸ್ತೆಯನ್ನು ಒಂದೂವರೆ ಕಿಲೋಮೀಟರ್‌ವರೆಗೆ ಜೋಡಿ ರಸ್ತೆಯನ್ನಾಗಿ ಅಭಿವೃದ್ಧಿಪಡಿಸಲಾಗಿತ್ತು. ಅದೀಗ ಬಾಪೂಜಿ ವೃತ್ತದಿಂದ ವರದರಾಜಸ್ವಾಮಿ ದೇವಸ್ಥಾನದವರೆಗೆ ಉತ್ತಮವಾಗಿಯೇ ಇದೆ. ಅಲ್ಲಿಂದ ಸಾರಿಗೆ ಡಿಪೋವರೆಗೆ ಡಾಂಬರ್ ಕಿತ್ತು ಗುಂಡಿ ಬಿದ್ದಿದೆ. ಇದರಿಂದ ವಾಹನ ಸಂಚರಿಸಲು ಸಾಧ್ಯವಾಗದ ನಿರ್ಮಾಣವಾಗಿದೆ. ಈ ಹಿನ್ನೆಲೆಯಲ್ಲಿ ಕಳೆದ ತಿಂಗಳು ಗುಂಡಿಗಳನ್ನು ಮುಚ್ಚಿಸಲು ಅಧಿಕಾರಿಗಳು ಮುಂದಾಗಿದ್ದರು.

ಆದರೆ, ಇದೀಗ ಉತ್ತಮವಾಗಿರುವ ರಸ್ತೆಯನ್ನೇ ಲಕ್ಷಾಂತರ ರೂ. ವೆಚ್ಚದಲ್ಲಿ ಅಧಿಕಾರಿಗಳು ಅಭಿವೃದ್ಧಿಪಡಿಸುತ್ತಿರುವುದರಿಂದ ಜನಪ್ರತಿನಿಧಿಗಳು ಮತ್ತು ಅಧಿಕಾರಿಗಳ ನಡೆ ಬಗ್ಗೆ ಅನುಮಾನ ವ್ಯಕ್ತಪಡಿಸುತ್ತಿದ್ದಾರೆ.

ಅಧಿಕಾರಿಗಳಾದ ರಾಚಯ್ಯ, ಧ್ರುವಕುಮಾರ್, ಚಂದ್ರು ಸೇರಿದಂತೆ ಮತ್ತಿತರರು ಕಾಮಗಾರಿ ಸ್ಥಳದಲ್ಲಿ ವಾಸ್ತವ್ಯ ಹೂಡಿದ್ದಾರೆ.



ಎಚ್.ಡಿ.ಕೋಟೆ ಪಟ್ಟಣದಲ್ಲಿ ಉತ್ತಮ ರಸ್ತೆಯನ್ನೇ ಡಾಂಬರೀಕರಣ ಮಾಡಿ ಮತ್ತೆ ಅಭಿವೃದ್ಧಿ ಪಡಿಸುತ್ತಿರುವುದು. ಮತ್ತೊಂದು ಚಿತ್ರದಲ್ಲಿ ಅದೇ ರಸ್ತೆಯ ಮತ್ತೊಂದು ಭಾಗ ತೀರಾ ಹದಗೆಟ್ಟಿರುವುದನ್ನು ಕಾಣಬಹುದು.

> ಮುಖ್ಯಮಂತ್ರಿಗಳ ರಸ್ತೆ ಅಭಿವೃದ್ಧಿ ಯೋಜನೆಯಡಿ ಉತ್ತಮ ರಸ್ತೆಯನ್ನು ಮತ್ತಷ್ಟು ಅಭಿವೃದ್ಧಿಪಡಿಸಲು ಕಾಮಗಾರಿ ನಡೆಸಲಾಗುತ್ತಿದೆ. ಬೇರೆ ಯೋಜನೆಯಲ್ಲಿ ಹದಗೆಟ್ಟಿರುವ ಉಳಿದ ರಸ್ತೆಗಳ ಕಾಮಗಾರಿಯನ್ನೂ ಶೀಘ್ರದಲ್ಲಿ ನಡೆಸಲಾಗುವುದು.
>
> **-ಪಿಡಬ್ಲ್ಯುಡಿ ಅಧಿಕಾರಿಗಳು**

ಸಾಲಿಗ್ರಾಮ ಗ್ರಾಪಂಗೆ ಸತೀಶ್ ಅಧ್ಯಕ್ಷ

ಸಾಲಿಗ್ರಾಮ,ಜ.೧೨– ಕೆ.ಆರ್.ನಗರ ತಾಲ್ಲೂಕು ಸಾಲಿಗ್ರಾಮ ಗ್ರಾಮ ಪಂಚಾಯಿತಿ ಅಧ್ಯಕ್ಷರಾಗಿ ಜಾ.ದಳ ಬೆಂಬಲಿತ ಅಭ್ಯರ್ಥಿ ಸತೀಶ್ ಅವಿರೋಧವಾಗಿ ಆಯ್ಕೆಯಾದರು.

೩೦ ಸದಸ್ಯ ಬಲದ ಪಂಚಾಯಿತಿಯಲ್ಲಿ ಇಬ್ಬರು ನಾಮಪತ್ರ ಸಲ್ಲಿಸಿದ್ದು, ಒಬ್ಬ ಸದಸ್ಯ ನಾಮಪತ್ರ ಹಿಂಪಡೆದ ಕಾರಣ ಚುನಾವಣಾಧಿಕಾರಿ ಕೃಷಿ ಇಲಾಖೆ ರಂಗರಾಜನ್ ಅವರು ಸತೀಶ್ ಅವರನ್ನು ಅಧ್ಯಕ್ಷರನ್ನಾಗಿ ಘೋಷಣೆ ಮಾಡಿದರು.

ಜಾ.ದಳ ಹೋಬಳಿ ಘಟಕದ ಅಧ್ಯಕ್ಷ ತಿಮ್ಮೇಗೌಡ, ಪ್ರಧಾನ ಕಾರ್ಯದರ್ಶಿ ಲಾಲೂ ಸಾಹೇಬ, ಗ್ರಾಪಂ ಉಪಾಧ್ಯಕ್ಷೆ ಕುಸುಮಾ ಶಿವಕುಮಾರ್, ಮಾಜಿ ಅಧ್ಯಕ್ಷ ಪ್ರಕಾಶ, ಸದಸ್ಯರಾದ ಗುಣಪಾಲ ಜೈನ್, ಬಲರಾಮೇಗೌಡ, ಎಸ್.ಎಸ್.ಮಂಜುನಾಥ, ಭಾಗ್ಯಮ್ಮ ಪುಟ್ಟೇಗೌಡ, ಶಶಿಕಲಾ ಜಯರಾಮು, ಪಿಂಕಿ, ರಾಮಯ್ಯ, ಹರೀಶ, ಬಾಂಡ್ ನಾಗರಾಜು, ವಸಂತ, ನಾಗೇಂದ್ರ ಪಿಡಿಒ ಮಂಜುನಾಥ, ವಾಹನ ಚಾಲಕರ ಸಂಘದ ಅಧ್ಯಕ್ಷ ಮಂಜುನಾಥ, ಗಾರೆ ಕೆಲಸಗಾರರ ಸಂಘದ ಅಧ್ಯಕ್ಷ ಲೋಕೇಶ, ಇಂಪನ ಟ್ರೇಡರ್ಸ್ ರಾಜೇಗೌಡ, ಬೊಮ್ಮಾರಾಯಿಗೌಡ, ಪುಟ್ಟಸ್ವಾಮಿಗೌಡ, ಪುಟ್ಟೇಗೌಡ, ಅನಂತು, ಸತೀಶ ಇನ್ನಿತರರು ಉಪಸ್ಥಿತರಿದ್ದರು.

ಜೈನ ಸಮಾಜದಿಂದ ತಟ್ಟೆಗಳ ವಿತರಣೆ

ಕೆ.ಆರ್.ನಗರ,ಜ.೧೨– ಕೆ.ಆರ್.ನಗರ ತಾಲ್ಲೂಕಿನ ಹೊಸಕೊಪ್ಪಲು ಗ್ರಾಮದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳು ಮತ್ತು ಅಂಗನವಾಡಿ ಮಕ್ಕಳಿಗೆ ಜೈನ ಸಮಾಜದ ಮುಖಂಡರು ತಟ್ಟೆಗಳನ್ನು ವಿತರಿಸಿದರು.

ಜೈನ ಸಮಾಜದ ಮುಖಂಡರಾದ ಧರ್ಮಚಂದ್ ಜೈನ್, ಮಾಂಗಲಾಲ್ ಜೈನ್, ಮದನ್‌ಲಾಲ್ ಜೈನ್, ಮೋಹನ್‌ದೇವಿ, ಸ್ವರಾಜ್ ಇಂಡಿಯಾ ಪಕ್ಷದ ಅಧ್ಯಕ್ಷ ಗರುಡಗಂಬಸ್ವಾಮಿ, ಶಿಕ್ಷಕ ಮುಕುಂದ ಮತ್ತಿತರರು ಈ ವೇಳೆ ಹಾಜರಿದ್ದರು.

ಗುರುಬೂದಿ ಸ್ವಾಮಿ ಶಾಲೆಯಲ್ಲಿ ಸ್ವಾಮಿ ವಿವೇಕಾನಂದರ ಸ್ಮರಣೆ

ಬನ್ನಿಕುಪ್ಪೆ,ಜ.೧೨– ಉಕ್ಕಿನಕಂತೆ ಮಾದಹಳ್ಳಿ ಮಠದ ಶ್ರೀ ಗುರುಬೂದಿ ಸ್ವಾಮಿ ವಿದ್ಯಾಸಂಸ್ಥೆಯಲ್ಲಿ ಸ್ವಾಮಿ ವಿವೇಕಾನಂದರ ೧೫೬ನೇ ಜನ್ಮದಿನೋತ್ಸವ ಮತ್ತು ಪೋಷಕರಿಗಾಗಿ ಕ್ರೀಡಾಕೂಟ ಏರ್ಪಡಿಸಲಾಗಿತ್ತು.

ಮಠದ ಶ್ರೀ ಸಾಂಬಸದಾಶಿವ ಸ್ವಾಮೀಜಿ ಮಾತನಾಡಿ, ಸ್ವಾಮಿ ವಿವೇಕಾನಂದರು ಸೋದರತ್ವ ಭಾವನೆ ಬಿತ್ತಿದವರು. ಭಾರತದ ಸಂಸ್ಕೃತಿಯನ್ನು ಪ್ರಪಂಚಕ್ಕೇ ಸಾರಿದ ಮಹಾ ಮೇಧಾವಿ. ಅವರು ಯುವಕರಿಗೆ ಪ್ರೇರಣೆ ನೀಡಿದಂತಹ ಮಹಾ ಚೇತನ ಎಂದು ಸ್ಮರಿಸಿದರು.

ಶಿಕ್ಷಕ ಮಹೇಶ ಮಾತನಾಡಿ, ಪೋಷಕರು ವರ್ಷ ಪೂರ್ತಿ ತಮ್ಮ ಕೆಲಸಗಳಲ್ಲಿ ಮಗ್ನರಾಗಿರುತ್ತಾರೆ. ಅವರ ಸಂತೋಷಕ್ಕಾಗಿ ಮಕ್ಕಳ ಜೊತೆ ಇಂದು ಕ್ರೀಡಾಕೂಟವನ್ನು ಏರ್ಪಡಿಸಿದ್ದೇವೆ ಎಂದರು.

ಸಂಸ್ಥೆಯ ಆಡಳಿತ ಅಧಿಕಾರಿ ಟಿ.ಎ.ಮಂಜುನಾಥ್, ಮುಖ್ಯೋಪಾಧ್ಯಾಯಿನಿ ವಿದ್ಯಾರಾಣಿ, ಉದ್ಯಮಿ ವೀರೇಂದ್ರಕುಮಾರ, ಭಾಗ್ಯ, ಕುಮಾರ ಮೊದಲಾದವರು ಭಾಗವಹಿಸಿದ್ದರು.

ಸಹಶಿಕ್ಷಕರ ಸಂಘದ ದಿನದರ್ಶಿಕೆ ಬಿಡುಗಡೆ

ತಿ.ನರಸೀಪುರ ತಾಲ್ಲೂಕು ಪ್ರೌಢಶಾಲಾ ಸಹಶಿಕ್ಷಕರ ಸಂಘದಿಂದ ನೂತನ ದಿನದರ್ಶಿಕೆಯನ್ನು ಬಿಇಒ ಮರಿಸ್ವಾಮಿ ಬಿಡುಗಡೆಗೊಳಿಸಿದರು. ಸಂಘದ ಅಧ್ಯಕ್ಷ ಪುಟ್ಟಸ್ವಾಮಿ, ವೀರಭದ್ರಯ್ಯ, ಚಿನ್ನಸ್ವಾಮಿ ಅಕ್ಷರ ದಾಸೋಹ ಸಹಾಯಕ ನಿರ್ದೇಶಕ ಮಲ್ಲಿಕಾರ್ಜುನ್, ನೌಕರರ ಸಂಘದ ಅಧ್ಯಕ್ಷ ಶಿವಶಂಕರಮೂರ್ತಿ, ಎಚ್‌ಎಂ ಜ್ಞಾನೇಶ್ವರಿ, ನಾಗೇಂದ್ರ ಪ್ರಭು ಹಾಜರಿದ್ದರು.

ವಿವೇಕಾನಂದರಿಂದ ಭಾರತದ ಸಂಸ್ಕೃತಿ ವಿಶ್ವಕ್ಕೆ ಪರಿಚಯ

ಪಿರಿಯಾಪಟ್ಟಣದಲ್ಲಿ ನಡೆದ ಕಾರ್ಯಕ್ರಮ ಉದ್ಘಾಟಿಸಿ ಜಗದೀಶ್ ಕಾರಂತ್‌ಜೀ

ಪಿರಿಯಾಪಟ್ಟಣದಲ್ಲಿ ಹಿಂದೂ ಹಿತರಕ್ಷಣಾ ಸಮಿತಿ, ಹಿಂದೂ ಜಾಗರಣಾ ವೇದಿಕೆ ವತಿಯಿಂದ ಆಯೋಜಿಸಿದ್ದ ಸ್ವಾಮಿ ವಿವೇಕಾನಂದರ ಜಯಂತ್ಯುತ್ಸವ, ಹಿಂದೂ ಮಹಾ ಸಂಗಮ ಕಾರ್ಯಕ್ರಮವನ್ನು ಜಗದೀಶ್ ಕಾರಂತ್‌ಜೀ ಉದ್ಘಾಟಿಸಿದರು.

ಪಿರಿಯಾಪಟ್ಟಣ,ಜ.೧೨– ಸ್ವಾಮಿ ವಿವೇಕಾನಂದರು ಭಾರತದ ಭವ್ಯ ಸಂಸ್ಕೃತಿಯನ್ನು ಆಧ್ಯಾತ್ಮಿಕ ಮತ್ತು ವೈಚಾರಿಕವಾಗಿ ಇಡೀ ವಿಶ್ವಕ್ಕೆ ಪರಿಚಯಿಸಿದ ಮಹಾನ್ ಸನ್ಯಾಸಿಯಾಗಿದ್ದರು ಎಂದು ಹಿಂದೂ ಜಾಗರಣಾ ವೇದಿಕೆ ದಕ್ಷಿಣ ಪ್ರಾಂತ್ಯ ಪ್ರಮುಖ್ ಜಗದೀಶ್ ಕಾರಂತ್‌ಜೀ ತಿಳಿಸಿದರು.

ಅವರು ಪಟ್ಟಣದ ಸಾಯಿ ಸಮುದಾಯ ಭವನದಲ್ಲಿ ಹಿಂದೂ ಹಿತರಕ್ಷಣಾ ಸಮಿತಿ ಮತ್ತು ಹಿಂದೂ ಜಾಗರಣಾ ವೇದಿಕೆ ವತಿಯಿಂದ ಶುಕ್ರವಾರ ಆಯೋಜಿಸಿದ್ದ ಸ್ವಾಮಿ ವಿವೇಕಾನಂದರ ಜಯಂತ್ಯುತ್ಸವ ಹಾಗೂ ಹಿಂದೂ ಮಹಾ ಸಂಗಮ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಸ್ವಾಮಿ ವಿವೇಕಾನಂದರು ದೇಶದ ಯುವ ಜನತೆಯನ್ನು ಬಡಿದ್ದೆಬಿಸಿ ಸಶಕ್ತ ಭಾರತವನ್ನು ನಿರ್ಮಾಣ ಮಾಡುವ ಕನಸು ಹೊಂದಿದ್ದರು. ಬ್ರಿಟಿಷರ ಗುಲಾಮಗಿರಿಯಲ್ಲಿದ್ದ ಕಾಲದಲ್ಲಿ ಧರ್ಮ ಸಂಸತ್‌ನಲ್ಲಿ ಹಿಂದೂ ಸಂಸ್ಕೃತಿಯ ವಿಚಾರಧಾರೆಯನ್ನು ಮಂಡಿಸಿ ಜಗತ್ತಿನ ಎಲ್ಲಾ ದೇಶಗಳ ಕಣ್ಣು ತೆರೆಸಿದ ಮಹಾನ್ ದಾರ್ಶನಿಕ ಎಂದು ಸ್ಮರಿಸಿದರು.

ಪ್ರಸ್ತುತ ನಾವು ಭಾರತದಲ್ಲಿ ವಾಸಿಸುತ್ತಿದ್ದರೂ ನಾನು ಒಬ್ಬ ಹಿಂದೂ ಎಂದು ಹೆಮ್ಮೆಯಿಂದ ಹೇಳಿಕೊಳ್ಳಲು ಭಯ ಪಡುವ ಸ್ಥಿತಿ ನಿರ್ಮಾಣವಾಗಿದೆ ಎಂದು ಆತಂಕ ವ್ಯಕ್ತಪಡಿಸಿದರಲ್ಲದೆ, ಹಿಂದೂ ಸಭೆಗಳನ್ನು ಆಯೋಜಿಸುವುದು ಶಿಕ್ಷಾರ್ಹ ಅಪರಾಧ ಎಂಬಂತೆ ಪೊಲೀಸ್ ಅಧಿಕಾರಿಗಳು ನಿರ್ಬಂಧ ಹೇರುತ್ತಿರುವುದನ್ನು ನೋಡಿದರೆ ಭಾರತದಲ್ಲಿ ನಾವೇ ಅಲ್ಪಸಂಖ್ಯಾತರು ಎಂಬ ಭಾವನೆ ಮೂಡುತ್ತಿದೆ ಎಂದು ನುಡಿದರು.

ರಾವಂದೂರು ಮುರುಘಾ ಮಠದ ಶ್ರೀ ಮೋಕ್ಷಪತಿ ಸ್ವಾಮೀಜಿ, ಹಿಂದೂ ಸಮಾಜೋತ್ಸವ ಸಲಹಾ ಸಮಿತಿ ಅಧ್ಯಕ್ಷ ಬಿ.ವಿ. ಜವರೇಗೌಡ ಮಾತನಾಡಿದರು.

ಸಮಾಜೋತ್ಸವ ಕಾರ್ಯಕಾರಿಣಿ ಸಮಿತಿ ಸದಸ್ಯ ಡಾ.ಪ್ರಕಾಶ್ ಬಾಬುರಾವ್, ಹಿರಿಯ ಆರ್‌ಎಸ್ಎಸ್ ಮುಖಂಡ ನಾರಾಯಣ್ ರಾವ್, ತಾಲ್ಲೂಕು ಬಿಜೆಪಿ ಅಧ್ಯಕ್ಷ ಪಿ.ಜೆ.ರವಿ, ಯುವ ಮೋರ್ಚಾ ಅಧ್ಯಕ್ಷ ಪಿ.ಟಿ.ಲಕ್ಷ್ಮಿನಾರಾಯಣ, ತಾಲ್ಲೂಕು ಬಿಜೆಪಿ ಘಟಕದ ಮಹಿಳಾ ಅಧ್ಯಕ್ಷೆ ನಳಿನಿ, ಬಸವರಾಜಪ್ಪ, ಶಂಭುಲಿಂಗಪ್ಪ, ಆರ್.ಟಿ.ಸತೀಶ್, ಲೋಕಪಾಲಯ್ಯ, ರಮೇಶ್, ಬೆಮ್ಮತ್ತಿ ಕೃಷ್ಣ, ಶಿವಣ್ಣ, ಅನೂಪ್‌ಕುಮಾರ್, ಆಶಾ ಬಾಳೇಕಟ್ಟೆ ಮತ್ತಿತರರು ಕಾರ್ಯಕ್ರಮದಲ್ಲಿ ಹಾಜರಿದ್ದರು.

ಸಿಪಿಐ ಎಚ್.ಎನ್.ಸಿದ್ದಯ್ಯ ನೇತೃತ್ವದಲ್ಲಿ ಎಸ್‌ಐ ರವಿಕಿರಣ್, ಚಿಕ್ಕಸ್ವಾಮಿ ಹಾಗೂ ಸಿಬ್ಬಂದಿ ಬಂದೋಬಸ್ತ್ ಕಲ್ಪಿಸಿದ್ದರು. ಕೆಲ ಯುವಕರು ಬೈಕ್ ಹಾಗೂ ವಾಹನಗಳಿಗೆ ಕಟ್ಟಿದ್ದ ಕೇಸರಿ ಧ್ವಜವನ್ನು ಪೊಲೀಸ್ ಸಿಬ್ಬಂದಿ ತೆರವುಗೊಳಿಸುತ್ತಿದ್ದಾಗ ಮಾತಿನ ಚಕಮಕಿ ಸಹ ನಡೆಯಿತು.

ಶಿಕ್ಷಣ ಕ್ಷೇತ್ರ ಅಭಿವೃದ್ಧಿಗೆ ಯಾವುದೇ ಅನುದಾನ ಬಳಕೆ

ಹುಣಸೂರು ತಾಪಂ ಸಾಮಾನ್ಯ ಸಭೆಯಲ್ಲಿ ಇಒ ಸಿ.ಆರ್.ಕೃಷ್ಣಕುಮಾರ್ ಹೇಳಿಕೆ

ಹುಣಸೂರು,ಜ.೧೨– ತಾಲ್ಲೂಕಿನಲ್ಲಿ ಗುಣಮಟ್ಟದ ಶಿಕ್ಷಣ ನೀಡಲು ಮತ್ತು ಶಾಲೆಗಳಿಗೆ ಮೂಲ ಸೌಕರ್ಯಗಳ ಕೊರತೆ ಇದ್ದು ಮಾಹಿತಿ ನೀಡಿದರೆ ಶೀಘ್ರವೇ ಸರ್ಕಾರ ಮತ್ತಿತರ ವಿಶೇಷ ಅನುದಾನ ಬಳಕೆ ಮಾಡಿ ಸಮಸ್ಯೆ ನಿವಾರಣೆ ಮಾಡಲಾಗುತ್ತದೆ ಎಂದು ತಾಪಂ ಇಒ ಸಿ.ಆರ್.ಕೃಷ್ಣಕುಮಾರ್ ತಿಳಿಸಿದರು.

ಪಟ್ಟಣದ ತಾಪಂ ಸಭಾಂಗಣದಲ್ಲಿ ಅಧ್ಯಕ್ಷೆ ಪದ್ಮ ಬಸವರಾಜು ಅವರ ಅಧ್ಯಕ್ಷತೆಯಲ್ಲಿ ನಡೆದ ಸಾಮಾನ್ಯ ಸಭೆಯಲ್ಲಿ ಮಾತನಾಡಿದ ಅವರು, ತಾಲ್ಲೂಕಿನಲ್ಲಿ ಪ್ರತಿ ಮಗು ಸಹ ಶಿಕ್ಷಣದಿಂದ ವಂಚಿತವಾಗದ ಹಾಗೆ ಶಿಕ್ಷಣ ಇಲಾಖೆ ಗಮನಹರಿಸಬೇಕು. ಪ್ರತಿ ಗ್ರಾಪಂ ವ್ಯಾಪ್ತಿಯಲ್ಲೂ ಆರ್‌ಡಿಪಿಆರ್ ಮತ್ತು ಶಿಕ್ಷಣ ಇಲಾಖೆಯಿಂದ ತಲಾ ೨ ಶಾಲೆಗಳಿಗೆ ಸರ್ಕಾರದ ಲಕ್ಷ ರೂ. ಮತ್ತು ನರೇಗಾದ ೭೫ ಸಾವಿರ ರೂ. ವೆಚ್ಚದಲ್ಲಿ ಶೌಚಾಲಯ ನಿರ್ಮಿಸಲಾಗುತ್ತಿದೆ. ಉಳಿದಂತೆ ಯಾವುದೇ ಸಮಸ್ಯೆಗಳಿದ್ದರೂ ಮಾಹಿತಿ ನೀಡಿದರೆ, ಶಾಸಕರಿಗೆ ಮನವಿ ಮಾಡಿ ವಿಶೇಷ ಅನುದಾನದ ಮೂಲಕ ಗುಣಮಟ್ಟದ ಶಿಕ್ಷಣಕ್ಕೆ ಒತ್ತು ನೀಡಬಹುದೆಂದರು.

ಬಿಇಒ ರೇವಣ್ಣ ಮಾತನಾಡಿ, ತಾಲ್ಲೂಕಿನಲ್ಲಿ ಎಸ್‌ಎಸ್ಎಲ್‌ಸಿಯ ೧೧೦೦ ವಿದ್ಯಾರ್ಥಿಗಳು ಕಲಿಕೆಯಲ್ಲಿ ಹಿಂದೆ ಉಳಿದಿದ್ದಾರೆ. ಅವರಿಗೆ ೩ ವರ್ಷದ ಹಿಂದಿನ ಪ್ರಶ್ನೆ ಪತ್ರಿಕೆಗಳನ್ನು ಸಂಗ್ರಹಿಸಿ ಕೈಪಿಡಿ ನೀಡಲಾಗಿದೆ. ವಿಶೇಷ ತರಗತಿಗಳನ್ನು ತೆಗೆದುಕೊಳ್ಳಲಾಗುತ್ತಿದೆ. ಶಾಲೆ ಬಿಟ್ಟ ಮಕ್ಕಳನ್ನು ಸಹ ಶಾಲೆಗೆ ಕರತರುವ ಪ್ರಯತ್ನ ಮಾಡಲಾಗುತ್ತಿದೆ. ಹಾಡಿ ಮಕ್ಕಳ ಶಿಕ್ಷಣಮಟ್ಟವನ್ನು ಹೆಚ್ಚಿಸಲಾಗುತ್ತಿದೆ ಎಂದರು. ಸಭೆಯಲ್ಲಿ ಸದಸ್ಯರು ಹಾಗೂ ತಾಲ್ಲೂಕು ಮಟ್ಟದ ಅಧಿಕಾರಿಗಳು ಭಾಗವಹಿಸಿದ್ದರು.

ಹುಣಸೂರು ಪಟ್ಟಣದ ತಾಪಂ ಸಭಾಂಗಣದಲ್ಲಿ ಸಾಮಾನ್ಯ ಸಭೆ ಪದ್ಮಮ್ಮ ಬಸವರಾಜು ಅವರ ಅಧ್ಯಕ್ಷತೆಯಲ್ಲಿ ನಡೆಯಿತು.

ಕೃಷಿ ಅಧಿಕಾರಿ ಮಾದರಿ

ತಾಲ್ಲೂಕಿನಲ್ಲಿ ಕೃಷಿ ಇಲಾಖೆ ಸಹಾಯಕ ನಿರ್ದೇಶಕ ಜಿ.ವೆಂಕಟೇಶ್ ಪ್ರತಿ ಸಭೆಯಲ್ಲಿ ನಿಖರ ಮಾಹಿತಿ ಮತ್ತು ಪ್ರಶ್ನಾವಳಿಗೆ ಉತ್ತರ ನೀಡುತ್ತಾ ಸಭೆಯ ಗೌರವ ಕಾಪಾಡುವ ಮೂಲಕ ಮಾದರಿ ಅಧಿಕಾರಿಯಾಗಿದ್ದಾರೆ. ಅವರಂತೆಯೇ ಎಲ್ಲ ಇಲಾಖೆ ಅಧಿಕಾರಿಗಳೂ ಕಾರ್ಯನಿರ್ವಹಿಸಿ.

–ಗಣಪತಿ ಇಂಡೂಲ್ಕರ್, ಸಾಮಾಜಿಕ ನ್ಯಾಯ ಸ್ಥಾಯಿಸಮಿತಿ ಅಧ್ಯಕ್ಷ.

ಸಹಕಾರಿ ಅಧಿಕಾರಿ ಗೈರು–ಸಭೆ ಗರಂ

ಸಾಮಾನ್ಯ ಸಭೆ ಮತ್ತು ಪ್ರಗತಿ ಪರಿಶೀಲನಾ ಸಭೆಗಳಿಗೆ ಸಹಕಾರ ಇಲಾಖೆ ಸಹಾಯಕ ನಿಬಂಧಕ ಮಂಜುನಾಥ್ ಗೈರಾಗಿ, ಸಹಾಯಕರನ್ನು ಕಳುಹಿಸಿ ಸಭೆಗೆ ವಂಚಿಸುತ್ತಿದ್ದಾರೆ. ಅಲ್ಲದೇ ಚಿಲ್ಕುಂದ ಪಿಎಸಿಸಿಯಲ್ಲಿ ಗುಮಾಸ್ತೆಯನ್ನು ವಜಾಗೊಳಿಸಿರುವ ಬಗ್ಗೆ ನ್ಯಾಯಾಲಯದ ತೀರ್ಪು ಬಂದರೂ ಸಹಕಾರ ಇಲಾಖೆ ಏಕೆ ನ್ಯಾಯ ಒದಗಿಸುತ್ತಿಲ್ಲ?

–ಪ್ರೇಮಕುಮಾರ್, ತಾಪಂ ಉಪಾಧ್ಯಕ್ಷ.

ಬಾಲಗಂಗಾಧರನಾಥ ಸ್ವಾಮೀಜಿಯವರ ಜಯಂತ್ಯುತ್ಸವ

೧೩ರಿಂದ ೧೮ರವರೆಗೆ ವೈವಿಧ್ಯಮಯ ಕಾರ್ಯಕ್ರಮ

* ೧೫ರಂದು ರಾಜ್ಯಮಟ್ಟದ ಮಕ್ಕಳ ಸಾಹಿತ್ಯ ಸಮ್ಮೇಳನ * ೧೭ರಂದು ಚುಂಚನಾದ್ರಿ ಮಹಿಳಾ ಸಮಾವೇಶ

ನಾಗಮಂಗಲ,ಜ.೧೨–ಆದಿಚುಂಚನಗಿರಿ ಕ್ಷೇತ್ರದಲ್ಲಿ ಚುಂಚಶ್ರೀ ಬಾಲಗಂಗಾಧರನಾಥ ಸ್ವಾಮೀಜಿ ಅವರ ೭೩ನೇ ಜಯಂತ್ಯುತ್ಸವ ಹಾಗೂ ೫ನೇ ವರ್ಷದ ಸಂಸ್ಮರಣಾ ಮಹೋತ್ಸವ ಜ.೧೩ರಿಂದ ೧೮ರವರೆಗೆ ನೆರವೇರಲಿದೆ ಎಂದು ಪೀಠಾಧ್ಯಕ್ಷರಾದ ನಿರ್ಮಲಾನಂದನಾಥಸ್ವಾಮೀಜಿ ತಿಳಿಸಿದರು.

ಮಠದಲ್ಲಿ ನಡೆದ ಪ್ರತಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದ ಅವರು, ಜ.೧೪ರಂದು ಗುರು ನಮನ, ಹಿರಿಯ ವಿದ್ಯಾರ್ಥಿಗಳ ವೇದಿಕೆ ಸಮಾರಂಭ ನಡೆಯಲಿದ್ದು, ಈ ಸಮಾರಂಭಕ್ಕೆ ರಾಜ್ಯದ ವಿವಿಧ ಭಾಗಗಳಿಂದ ಶ್ರೀಮಠದಲ್ಲಿ ವಿದ್ಯಾಭ್ಯಾಸ ಮಾಡಿದ ವಿದ್ಯಾರ್ಥಿಗಳು ಆಗಮಿಸಲಿದ್ದಾರೆ. ಜ.೧೫ರ ಸೋಮವಾರ ಬೆಳಿಗ್ಗೆ ೯ ಗಂಟೆಗೆ ರಾಜ್ಯಮಟ್ಟದ ಮಕ್ಕಳ ಕನ್ನಡ ಸಾಹಿತ್ಯ ಸಮ್ಮೇಳನ ಉದ್ಘಾಟನೆಯಾಗಲಿದೆ ಎಂದರು.

ರಥಬೀದಿಯ ಮೂಲಕ ಮೆರವಣಿಗೆಯೊಂದಿಗೆ ಪ್ರಾರಂಭವಾಗಿ ಬಿಜಿಎಸ್ ಸಭಾಭವನದ ಮುಂಭಾಗ ಧ್ವಜಾರೋಹಣದ ಮೂಲಕ ಕಾರ್ಯಕ್ರಮಕ್ಕೆ ವಿದ್ಯುಕ್ತ ಚಾಲನೆ ನೀಡಲಾಗುತ್ತದೆ. ಸಮಾರಂಭಕ್ಕೆ ರಾಜ್ಯದ ವಿವಿಧೆಡೆಗಳಿಂದ ಆಗಮಿಸುವ ಯುವ ಕವಿಗಳು ಗೋಷ್ಠಿಗಳಲ್ಲಿ ಪಾಲ್ಗೊಳ್ಳುವರು. ಜ.೧೬ನೇ ಮಂಗಳವಾರ ೨ ಗಂಟೆಗೆ ಸಮಾರೋಪ ಸಮಾರಂಭ ನೆರವೇರುವುದು. ಜ.೧೭ರ ಬುಧವಾರ ಬೆಳಿಗ್ಗೆ ೯.೩೦ಕ್ಕೆ ಚುಂಚನಾದ್ರಿ ಮಹಿಳಾ ಸಮಾವೇಶ ನಡೆಯಲಿದೆ ಎಂದರು.

ಜ.೧೮ರಂದು ಬೆಳಿಗ್ಗೆ ೧೦.೩೦ಕ್ಕೆ ಗುರುನಮನ, ಸಂತ ಭಕ್ತರ ಸಂಗಮ ನಡೆಯಲಿದ್ದು, ರಾಜ್ಯ ಹಾಗೂ ಹೊರ ರಾಜ್ಯಗಳಿಂದ ಮಠಾಧೀಶರು, ಸಂಸದರು, ಸಚಿವರು, ಸಾಹಿತಿಗಳು, ಶಾಸಕರು ಆಗಮಿಸುವರು. ಈ ಎಲ್ಲಾ ಕಾರ್ಯಕ್ರಗಳು ಮಠಾಧೀಶ ನಿರ್ಮಲಾನಂದನಾಥಸ್ವಾಮೀಜಿ ಸಮ್ಮುಖ ದಲ್ಲಿ ನಡೆಯಲಿವೆ.

ಗೋಷ್ಠಿಯಲ್ಲಿ ಮಠದ ಕಾರ್ಯದರ್ಶಿ ಪ್ರಸನ್ನನಾಥಸ್ವಾಮೀಜಿ, ಮಕ್ಕಳ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಅಶೋಕ್, ಜಿಲ್ಲಾಧ್ಯಕ್ಷ ಎಂ.ಎನ್.ಮಂಜುನಾಥ್ ಇತರರಿದ್ದರು.

ಜನ, ಜಾನುವಾರುಗಳ ಮೇಲೆ ಹುಚ್ಚುನಾಯಿ ದಾಳಿ

ಹದಿನೈದು ಮಂದಿಗೆ ಗಾಯ, ನಾಯಿಯನ್ನು ಹೊಡೆದು ಸಾಯಿಸಿದ ಗ್ರಾಮಸ್ಥರು

ಭಾರತೀನಗರ,ಜ.೧೨–ಹುಚ್ಚು ನಾಯಿಯೊಂದು ೧೫ಕ್ಕೂ ಹೆಚ್ಚು ಮಂದಿಗೆ ಮತ್ತು ಜಾನುವಾರಗಳಿಗೆ ಕಚ್ಚಿ ತೀವ್ರ ಗಾಯಗೊಳಿಸಿರುವ ಘಟನೆ ಇಲ್ಲಿಗೆ ಸಮೀಪದ ಕರಡಕೆರೆ ಗ್ರಾಮದಲ್ಲಿ ಜರುಗಿದೆ.

ಗ್ರಾಮದ ಗೌರಮ್ಮ(೫೯), ಲಕ್ಷ್ಮಮ್ಮ(೫೧), ತಿಮ್ಮಮ್ಮ(೭೯), ಬೋರೇಗೌಡ(೪೨), ಜಯಮ್ಮ(೪೭), ಶಿವಲಿಂಗೇಗೌಡ(೬೧), ಶ್ರೇಯಾ(೧೭), ಹನುಮಮ್ಮ(೮೯) ಸೇರಿದಂತೆ ಹಲವರಿಗೆ ಕಚ್ಚಿದ್ದು ೨ ಹಸು ಮತ್ತು ೪ ಕರುಗಳಿಗೂ ಸಹ ಮನಬಂದಂತೆ ಕಚ್ಚಿ ಗಾಯಗೊಳಿಸಿವೆ.

ಗೌರಮ್ಮ ಮತ್ತು ಹನುಮ್ಮ ಅವರು ತೀವ್ರವಾಗಿ ಗಾಯಗೊಂಡಿದ್ದರಿಂದ ಮೈಸೂರಿನ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗಿದೆ. ನಾಯಿ ದಾಳಿಯಿಂದ ಗ್ರಾಮಸ್ಥರು ಕಂಗಾಲಾಗಿದ್ದು, ಗ್ರಾಪಂ ಅಸಹಕಾರದ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಮೊದಲು ಇಬ್ಬರಿಗೆ ಕಚ್ಚಿತ್ತು. ಎಚ್ಚೆತ್ತ ಗ್ರಾಮಸ್ಥರು ಗ್ರಾಮದ ಹೊರವಲಯದ ೪ಕಿ.ಮಿ.ವರೆಗೆ ನಾಯಿಯನ್ನು ಓಡಿಸಿದ್ದರು. ಮತ್ತೆ ಸಂಜೆ ವೇಳೆಗೆ ಬಂದು ತನ್ನ ದಾಳಿ ಮುಂದುವರಿಸಿತು. ೧೫ ರಿಂದ ೨೦ಕ್ಕೂ ಹೆಚ್ಚು ಮಂದಿಗೆ ಕಚ್ಚಿ ತೀವ್ರ ಗಾಯಗೊಳಿಸಿದೆ.

ಬಳಿಕ ಜ.೧೧ರಂದು ರಾತ್ರಿ ಜನರಿಗೆ ಕಚ್ಚಿದ್ದ ನಾಯಿಯನ್ನು ರೊಚ್ಚಿಗೆದ್ದ ಗ್ರಾಮಸ್ಥರು ಹೊಡೆದು ಸಾಯಿಸಿದ್ದಾರೆ. ನಾಯಿ ಕಚ್ಚಿರುವ ಕೆಲವು ಮಂದಿಯನ್ನು ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ, ಇನ್ನೂ ಕೆಲವರನ್ನು ಕೆ.ಎಂ.ದೊಡ್ಡಿ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಸೂಕ್ತ ಚಿಕಿತ್ಸೆ ನೀಡಿ ಯಾವುದೇ ಅಪಾಯವಾಗದಂತೆ ಮುಂಜಾಗ್ರತಾ ಕ್ರಮ ವಹಿಸಲಾಗಿದೆ ಎಂದು ವೈದ್ಯಾಧಿಕಾರಿ ಡಾ.ವೆಂಕಟೇಶ್ ತಿಳಿಸಿದ್ದಾರೆ.

ಹುಲಿ ಗಣತಿ: ಟ್ರ್ಯಾನ್ಸಾಕ್ಟ್ ಲೈನ್ ಸೆನ್ಸಸ್ ಆರಂಭ

ನಾಗರಹೊಳೆ ರಾಷ್ಟ್ರೀಯ ಉದ್ಯಾನದಲ್ಲಿ ಸಸ್ಯಾಹಾರಿ ಪ್ರಾಣಿಗಳು, ವನಸಂಪತ್ತಿನ ಮಾಹಿತಿ ಸಂಗ್ರಹ

ಜಿ.ಮಹದೇವಪ್ಪ

ಹುಣಸೂರು,ಜ.೧೨– ನಾಗರಹೊಳೆ ರಾಷ್ಟ್ರೀಯ ಉದ್ಯಾನದಲ್ಲಿ ರಾಷ್ಟ್ರೀಯ ಹುಲಿ ಗಣತಿ ಕಾರ್ಯದಲ್ಲಿ ಟ್ರ್ಯಾನ್ಸಾಕ್ಟ್ ಲೈನ್ ಸೆನ್ಸಸ್ ಪ್ರಾರಂಭವಾಗಿದ್ದು, ೨ ದಿನಗಳ ಕಾಲ ಅಭಯಾರಣ್ಯದಲ್ಲಿ ವಾಸಿಸುವ ಸಸ್ಯಾಹಾರಿ ಪ್ರಾಣಿಗಳು ಹಾಗೂ ವನಸಂಪತ್ತಿನ ಗಣತಿ ಕಾರ್ಯವನ್ನು ಅರಣ್ಯ ಸಿಬ್ಬಂದಿ ಮತ್ತು ಸ್ವಯಂಸೇವಕರು ನಡೆಸುತ್ತಿದ್ದಾರೆ.

೩ ದಿನಗಳಿಂದ ಅಭಯಾರಣ್ಯದಲ್ಲಿ ಮಾಂಸಾಹಾರಿ ಪ್ರಾಣಿಗಳ ಗಣತಿಕಾರ್ಯ ಯಶಸ್ವಿಯಾಗಿ ನಡೆಯಿತು. ೩ನೇ ದಿನದಿಂದ ಹುಣಸೂರು ವಲಯದಲ್ಲಿ ೨, ಡಿ.ಬಿ.ಕುಪ್ಪೆ ಹಾಗೂ ಅಂತರಸಂತೆ ವಲಯದಲ್ಲೂ ತಲಾ ಒಂದು ಹುಲಿಗಳು ಗಣತಿಕಾರರ ಮುಂದೆ ಪ್ರತ್ಯಕ್ಷವಾಗಿದ್ದರೆ, ಗುರುವಾರ ಅಂತರಸಂತೆ ವಲಯದಲ್ಲಿ ತಾಯಿ ಹಾಗೂ ಮೂರು ಹುಲಿ ಮರಿಗಳು ಹಾಗೂ ಡಿ.ಬಿ.ಕುಪ್ಪೆಯಲ್ಲಿ ೩ ಚಿರತೆ ಕಾಣಸಿಕ್ಕಿವೆ.

೩ ದಿನಗಳ ಕಾಲ ಅರಣ್ಯ ವ್ಯಾಪ್ತಿಯಲ್ಲಿ ೩೦ ಮಂದಿ ಸ್ವಯಂಸೇವಕರು, ೨೪ ಪೊನ್ನಂಪೇಟೆ ಫಾರೆಸ್ಟ್ರಿ ಕಾಲೇಜಿನ ವಿದ್ಯಾರ್ಥಿಗಳು ಹಾಗೂ ಅರಣ್ಯ ಸಿಬ್ಬಂದಿ ಇದೇ ಮೊದಲ ಬಾರಿಗೆ ಇಲಾಖೆ ಅಭಿವೃದ್ಧಿಪಡಿಸಿರುವ ಇಕೋಲಾಜಿಕಲ್ ಆ್ಯಪ್ ಮೂಲಕ ಹುಲಿ ಗಣತಿಯನ್ನು ಅತ್ಯಂತ ನಿಖರತೆಯಿಂದ ಯಶಸ್ವಿಯಾಗಿ ಮುಗಿಸಿದ್ದಾರೆ.

ಹುಲಿ ಗಣತಿಯೆಂದರೆ ಕಾಡಿನಲ್ಲಿ ಕೇವಲ ಹುಲಿ ಮಾತ್ರ ಇರುವುದಿಲ್ಲ. ಹುಲಿಗಳ ಆಹಾರವಾದ ಜಿಂಕೆಗಳು ಹೇಗಿವೆ? ಅವು ಜೀವಿಸಲು ಸಸ್ಯಪ್ರಭೇದ ಹೇಗಿದೆ? ಮೊದಲಾದ ಆಹಾರ ಸರಪಳಿ ಮತ್ತು ಪರಿಸರ ಸಮತೋಲನವನ್ನು ಅರಿತುಕೊಳ್ಳಲು ಅಭಯಾರಣ್ಯದಲ್ಲಿ ಇಂತಹ ಗಣತಿ ಕಾರ್ಯ ಮಾಡಲಾಗುತ್ತದೆ.

ಸಸ್ಯಾಹಾರಿ ಪ್ರಾಣಿಗಳು ಮತ್ತು ವಿವಿಧ ಸಸ್ಯ ಪ್ರಭೇದಗಳನ್ನು ಗುರುತಿಸುವ ಕಾರ್ಯ ಪ್ರತಿದಿನ ಬೆಳಗ್ಗೆ ೬ರಿಂದ ೮ರವರೆಗೆ ಮಾತ್ರ ನಡೆಯುತ್ತದೆ. ಏಕೆಂದರೆ ಬೆಳಗಿನ ಜಾವ ಸಸ್ಯಾಹಾರಿ ಪ್ರಾಣಿಗಳು ಚಟುವಟಿಕೆಯಿಂದ ಇರುವ ಕಾಲ. ಸಸ್ಯಾಹಾರಿ ಪ್ರಾಣಿಗಳ ಗಣತಿಕಾರರು ಇಲಾಖೆ ನಿರ್ಮಿಸಿರುವ ಟ್ರ್ಯಾನ್ಸಾಕ್ಟ್ ಲೈನ್‌ನಲ್ಲಿ ಸಾಗಬೇಕು. ಪ್ರತಿ ಆಂಟಿ ಪೌಚಿಂಗ್ ಕ್ಯಾಂಪ್ ವ್ಯಾಪ್ತಿಯಲ್ಲಿ ೨ ಕಿ.ಮೀ. ಉದ್ದದ ನೇರಮಾರ್ಗ ನಿರ್ಮಿಸಲಾಗಿರುತ್ತದೆ. ಇದರಲ್ಲಿ ಪ್ರತಿ ೪೦೦ ಮೀ.ಗೆ ೧ ವೃತ್ತವನ್ನು ಗುರುತಿಸಲಾಗಿರುತ್ತದೆ. ಮೂವರ ತಂಡದಲ್ಲಿ ಮೊದಲನೆಯವರು ದಿಕ್ಕು ಗುರುತಿಸಿಕೊಂಡು ಮುನ್ನಡೆದರೆ, ಅವರ ಹಿಂಬದಿಯ ೨ನೇ ಗಣತಿಕಾರ ಸುತ್ತಮುತ್ತಲ ಪರಿಸರ ಗಮನಿಸುತ್ತಾ ಪ್ರಾಣಿಗಳನ್ನು ಗುರುತಿಸುತ್ತಾರೆ. ೨ನೆಯವರು ತಿಳಿಸಿದ ಪ್ರಾಣಿಗಳನ್ನು ೩ನೆಯವರು ಆ್ಯಪ್‌ಗೆ ಅಪ್‌ಲೋಡ್ ಮಾಡುವ ಕಾರ್ಯ ನಡೆಸುತ್ತಾರೆ. ಈ ಆ್ಯಪ್‌ನಲ್ಲಿ ಆ ಭೂಭಾಗದ ಹಾಗೂ ಪ್ರಾಣಿಯ ಭಾವಚಿತ್ರ ಸೆರೆಹಿಡಿಯುವ ಅವಕಾಶವನ್ನೂ ನೀಡಲಾಗಿದೆ.

ನಾಗರಹೊಳೆ ರಾಷ್ಟ್ರೀಯ ಉದ್ಯಾನದಲ್ಲಿ ರಾಷ್ಟ್ರೀಯ ಹುಲಿ ಗಣತಿ ಕಾರ್ಯದಲ್ಲಿ ಆರಂಭವಾಗಿರುವ ಟ್ರ್ಯಾನ್ಸಾಕ್ಟ್ ಲೈನ್ ಸೆನ್ಸಸ್‌ನಲ್ಲಿ ಅರಣ್ಯ ಸಿಬ್ಬಂದಿ ಮತ್ತು ಸ್ವಯಂಸೇವಕರು ಗಣತಿ ಕಾರ್ಯಕ್ಕೆ ಸಂಬಂಧಿಸಿದ ನಕ್ಷೆಯನ್ನು ಅವಲೋಕಿಸುತ್ತಿರುವುದು.

> ಗಣತಿ ಕಾರ್ಯದ ವೇಳೆ ಕಾಡಿನ ಗಡಿಭಾಗದ ಹುಲ್ಲುಗಾವಲು, ಲಾಂಟಾನಾದಂತಹ ಕಳೆ ಬೆಳೆದಿರುವ ಪ್ರದೇಶ ಹಾಗೂ ಮಾನವನಿಂದಾಗುತ್ತಿರುವ ತೊಂದರೆಗಳು, ಸಮಸ್ಯೆಗಳನ್ನು ಗುರುತಿಸುವ ಕಾರ್ಯವೂ ನಡೆಯುವುದು ವಿಶೇಷ.